<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>

<u>ಪ್ರಕರಣ ಸಂಖ್ಯೆಃ ಎಸ್.ಸಿ 26/2020</u>

ದಿನಾಂಕಃ 06.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 5 (ಚಾ.ಸಾ.5)

| | | |
|---|---|---|
| ಹೆಸರು | ಃ | ಲಿಯಾಕತ್ |
| ತಂದೆಯ ಹೆಸರು | ಃ | ಹಸನ್ ಖಾನ್ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಟೈಲ್ಸ್ ಕೆಲಸ (ಮರದ ಕೆಲಸ) |
| ವಾಸ ಸ್ಥಳ | ಃ | ಚನ್ನಪಟ್ಟಣ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಚಾಸಾ.2 ಮತ್ತು ಆರೋಪಿ ಗೊತ್ತು.

2. ತಾಃ 21.01.2020 ರಂದು ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಪೊಲೀಸರು ಬಂದು ಮಹಜರ ಮಾಡಿದರು. ಗಲಾಟೆಯಾದ ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳದಲ್ಲಿ ಬಿದ್ದಿದ್ದ ರಕ್ತವಾಗಿದ್ದ ಮಣ್ಣು ಹಾಗು ಬೇರೆ ಮಣ್ಣನ್ನು ಡಬ್ಬಿಯಲ್ಲಿ ಸಂಗ್ರಹಿಸಿ, ನಾನು ಅಲ್ಲಿ ಇದ್ದ ಬಗ್ಗೆ ನನ್ನ ಸಹಿ ಪಡೆದರು. ಸಾಕ್ಷಿಯು ನಿಪಿ.2 - ಸ್ಥಳ ಮಹಜರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. (ರಕ್ತವಾದ ಮಣ್ಣು ಹಾಗು ಸಾದಾ ಮಣ್ಣು ಸಂಗ್ರಹಿಸಿರುವ ಡಬ್ಬಿಗಳನ್ನು ಪ್ಯಾಕ್ ಮಾಡಿರುವ ಬಟ್ಟೆಯ ಮೇಲಿನ ಚೀಟಿಗಳಲ್ಲಿ ತಮ್ಮ ಸಹಿ ಇರುವುದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ತೆರೆದ ನ್ಯಾಯಾಲಯದಲ್ಲಿ ಸದರಿ ಸೀಲಾದ ಪ್ಯಾಕೆಟ್‌ಗಳನ್ನು ತೆರೆಯಲಾಯಿತು.)

ಸಾಕ್ಷಿ ನೋಡಿ ಗುರುತಿಸಿದ ಸಾದಾ ಮಣ್ಣು ಹಾಗು ರಕ್ತವಾದ ಮಣ್ಣನ್ನು ಈಗ ಕ್ರಮವಾಗಿ ಎಂ.ಓ.1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

3. ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೂ ಹಾಗು ನಂತರ 4 ಗಂಟೆಯಿಂದ ರಾತ್ರಿ 8 ರಿಂದ 10 ಗಂಟೆಯವರೆಗೂ ನಾನು ಕೆಲಸ ಮಾಡುತ್ತೇನೆ. ಪೊಲೀಸರು ಸ್ಥಳಕ್ಕೆ ಬರುವಂತೆ ನನಗೆ ನೋಟೀಸ್ ನೀಡಿರುವುದಿಲ್ಲ. ನಾನು ಸಹಿ ಮಾಡಿದ ಮಹಜರಿನಲ್ಲಿ ಏನೇನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಗಾಗ ಪೊಲೀಸರು ಮಹಜರಿಗಳಿಗೆ ನನ್ನ ಸಹಿ ಪಡೆಯುತ್ತಿರುತ್ತಾರೆ ಅಂದರೆ ಸರಿಯಲ್ಲ.

4. ಗಲಾಟೆಯಾಗಿತ್ತು ಎಂದು ಮಾತ್ರ ಪೊಲೀಸರು ಹೇಳಿದ್ದು, ಯಾರ್‍ಯಾರ ನಡುವೆ ಗಲಾಟೆಯಾಗಿತ್ತು ಎಂದು ಪೊಲೀಸರು ಹೇಳಿರುವುದಿಲ್ಲ ಅಂದರೆ ಸಾಕ್ಷಿ ಒಂದು ಬಾರಿ ಹೌದು ಎಂದು ಮತ್ತೊಂದು ಬಾರಿ ಫರಾನ್‌ಗೆ ಆರೋಪಿಯನ್ನು ತೋರಿಸಿ ಈತ ಹೊಡೆದಿದ್ದು ಎಂದು ಮಾತನಾಡುತ್ತಿದ್ದರು ಎಂದು ನುಡಿದಿದ್ದಾರೆ.

5. ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ ಹಾಗು ನಾನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ನಿಪಿ.2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ನಾನು ಸಹಿ ಮಾಡಿದ ಸಮಯದಲ್ಲಿ ನಿಪಿ.2 ಕ್ಕೆ ಬೇರೆ ಯಾರ್‍ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.

6. ಎಂ.ಓ.1 ಮತ್ತು 2 ನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ಎಂ.ಓ.1 ಮತ್ತು 2 ರ ಮೇಲಿರುವ ಚೀಟಿಯಲ್ಲಿನ ನನ್ನ ಸಹಿಗಳನ್ನು ಪೊಲೀಸರು ನಾನು ಕೆಲಸ ಮಾಡುವ ಸ್ಥಳಕ್ಕೆ ಬಂದು ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಜರ್ ಕಾಲದಲ್ಲಿ ಆರೋಪಿಯನ್ನು ನೋಡಿದ್ದೆ.

**7.** ನನಗೆ ಈ ಕೇಸಿನ ಯಾವುದೇ ವಿಚಾರ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಫರಾದ್ ಹಾಗು ಮುಷಪೀರ್ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಯಾವುದೇ ಮಹಜರ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಫರಾನ್‌ಗೆ ಹೊಡೆದಿರುತ್ತಾನೆ ಎಂದು ನನಗೆ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**